ಕಥೆ




## ವಸುಮತಿ ಉಡುಪ

ಕಲೆ: ಎಸ್.ವಿ. ಹೂಗಾರ್




ಎಲ್ಲರಿಗಿಂತಾ ಕೊನೆಯಲ್ಲಿ ಕಾರಿನಿಂದಿಳಿದಳು ಭಾಮಾ ಭವಿಷ್ಯದಲ್ಲಿ ಅಳಿಯನಾಗಬಹುದಾದ ಸಾಧ್ಯತೆಯಿರುವ ಹುಡುಗನ ಮನೆಗೆ, ಅಲ್ಲಲ್ಲ, ಯುವಕನ ಮನೆಗೆ ಮೊದಲ ಬಾರಿಗೆ ಬರುತ್ತಿದ್ದಾರೆ. ಬರಿಗೈಯಲ್ಲಿ ಬರುವುದು ಪದ್ಧತಿ ಅಲ್ಲ. ಕವರಿನಲ್ಲಿ ಒಂದಿಷ್ಟು ಹಣ್ಣುಗಳು, ಸ್ಪೆಷಲ್ ಸಿಹಿ ತಿಂಡಿಯ ಪ್ಯಾಕೆಟ್ಟುಗಳು, ಜೋಪಾನವಾಗಿ ಕಾಪಾಡಿಕೊಂಡು ತಂದ ಹೂವಿನ ದಿಂಡು. ಅದಾಗಲೇ ಗಂಡ, ಮಗ, ಮಗಳು ಕಾರಿನಿಂದ ಇಳಿದು ಇವಳಿಗಾಗಿ ಕಾದಿದ್ದಾರೆ.

'ನೀವೇ ಇಲ್ಲಿಗೆ ಬಂದ್ಬಿಡಿ. ಮುಖ್ಯ ಹುಡುಗ, ಹುಡುಗಿ ಪರಸ್ಪರ ನೋಡಬೇಕು, ಅವರಿಗೆ ಒಪ್ಪಿಗೆಯಾಗ್ಬೇಕು' ಈ ಕಡೆಯಿಂದ ಸಹೃದಯತೆಯ ಆಹ್ವಾನ ಬಂದಿತ್ತು. ವಧೂವರಾನ್ವೇಷಣಾ ಕೇಂದ್ರಗಳಲ್ಲಿ ಮಗಳ ಹೆಸರು ನೋಂದಾಯಿಸಿ ಎರಡು ವರ್ಷ ಕಳೆದಿವೆ. ಫೋನ್ ಕರೆಗಳು ಬೇಕಾದಷ್ಟು ಬರುತ್ತಿದ್ದುದು ಹೌದಾದರೂ ಯಾಕೋ ಯಾವುದೂ ಸುಸೂತ್ರ ಆಗಿರಲಿಲ್ಲ. ಆಯ್ಕೆಯ ಕುರಿತು ಅತಿಯಾದ ಕಾಳಜಿ, ಅತಿಯಾದ ಮುನ್ನೆಚ್ಚರಿಕೆ, ಅತಿಯಾದ ನಿರೀಕ್ಷೆ ಎಂದು 'ಅತಿ' ಸೇರಿಸಿ ಗಂಡ ಅಸಮಾಧಾನ ತೋರಿಸುತ್ತಿದ್ದರೂ ಭಾಮಾ ಅದಕ್ಕೆಲ್ಲಾ ಸೊಪ್ಪು ಹಾಕಿರಲಿಲ್ಲ. ಮನೆಮಗಳಿಗೆ ಮೂವತ್ತು ಕಳೆದರೂ ತಲೆಬಿಸಿ ಮಾಡಿಕೊಳ್ಳದ ಕಾಲ ಇದು. ಮದುವೆ ಅಂದರೆ ಯಾವ ಕಾರಣಕ್ಕೂ ಆತುರ ಪಡಬಾರದು ಎಂದು ಭಾಮಾಳ ಅನಿಸಿಕೆ. ತಮ್ಮ ಮಗಳು ಯಾವುದರಲ್ಲೂ ಬೊಟ್ಟು ತೋರಿಸುವಂತಿಲ್ಲ. ಎಂ.ಎಸ್ಸಿ ಮಾಡಿಕೊಂಡು ಕಾಲೇಜಿನಲ್ಲಿ ಉಪನ್ಯಾಸಕಿಯ ಹುದ್ದೆ ಗಿಟ್ಟಿಸಿಕೊಂಡಿದ್ದಾಳೆ. ಕೈತುಂಬಾ ಸಂಬಳ ಬರುತ್ತದೆ. ಕೆಲಸ ಬಿಟ್ಟು ಮನೆಯಲ್ಲಿ ಕೂತು ಟ್ಯೂಷನ್ ಹೇಳಿಕೊಟ್ಟರೂ ದುಡಿಮೆಗೆ ಮೋಸ ಇಲ್ಲ. 'ನೀವೊಬ್ರು, ಏಳು ತಿಂಗಳಿಗೆ ಹುಟ್ಟಿದ ಹಾಗೆ ಮಾಡ್ತೀರಿ. ನಿಮ್ಮನ್ನ ಕೇಳಿದ್ರೆ…' ಎನ್ನುತ್ತಾ ಗಂಡನನ್ನು ಮೂಲೆಗೆ ಕೂರಿಸಿ ಯಜಮಾನಿಕೆಯ ಪಟ್ಟವನ್ನು ಸ್ವಯಂ ಘೋಷಿಸಿಕೊಂಡಿದ್ದಳು ಭಾಮಾ ಮಗಳ ಸಪೋರ್ಟು ಅವಳ ನಿರ್ಧಾರಕ್ಕೆ ಪುಷ್ಟಿ